ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಗಸ್ಟ್ 2020ಮಾಹೆಯಿಂದ ನವೆಂಬರ್-2020ರ ಮಾಹೆಯವರೆಗೆ ವೇತನಾನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಅಪ್ರಾ/ಕಾ-1/23/2019-20, ದಿನಾಂಕ:08.07.2020.

587
24/7/20

*****

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರು 2020-21ನೇ ಸಾಲಿನಲ್ಲಿ ಕನ್ನಡ ಅಭಿವೃದ್ಧಿ ಪ್ರಧಿಕಾರಕ್ಕೆ ಯೋಜನಾನುದಾನಕ್ಕೆ ರೂ.200.00ಲಕ್ಷಗಳನ್ನು ಹಾಗೂ ಅಧಿಕಾರಿ / ಸಿಬ್ಬಂದಿಯ ವೇತನಕ್ಕೆ ರೂ.52.00 ಲಕ್ಷಗಳು, ಗುತ್ತಿಗೆ / ಹೊರಗುತ್ತಿಗೆ ನೌಕರರಿಗೆ ರೂ.37.00 ಲಕ್ಷಗಳನ್ನು ಆಯವ್ಯಯದಲ್ಲಿ ಮೀಸಲಿರಿಸಲಾಗಿರುತ್ತದೆ.

ಮುಂದುವರೆದು, ಆಗಸ್ಟ್-2020ರ ಮಾಹೆಯಿಂದ ನವೆಂಬರ್-2020ರ ಮಾಹೆಯವರೆಗೆ ವೇತನಕ್ಕೆ ಅನುದಾನ ಈ ಕೆಳಕಂಡ ಲೆಕ್ಕಶೀರ್ಷಿಕೆಗಳನ್ವಯ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕಶೀರ್ಷಿಕೆ | ಆರ್ಥಿಕ ಇಲಾಖೆಯಿಂದ ತುಟ್ಟಿ ಭತ್ಯೆ ತಡೆಹಿಡಿದು ಬಿಡುಗಡೆ ಮಾಡಲಾದ ಮೊತ್ತ | ಆಗಸ್ಟ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ಸೆಪ್ಟಂಬರ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ಅಕ್ಟೋಬರ್2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ನವೆಂಬರ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ |
|---|---|---|---|---|---|---|
| 01. | 2052-00-092-0-09-115 | 37.00 | 3.08 | 3.08 | 3.08 | 3.08 |
| 02. | 2052-00-092-0-09-101 | 47.71 | 3.98 | 3.98 | 3.98 | 3.98 |
| ಒಟ್ಟು | | 84.71 | **7.06** | **7.06** | **7.06** | **7.06** |

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 99 ಕೆಓಎಲ್ ಆಕ 2020, ಬೆಂಗಳೂರು, ದಿನಾಂಕ:23.07.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 'ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು / ಸಿಬ್ಬಂದಿಯ ಆಗಸ್ಟ್-2020ರ ಮಾಹೆಯಿಂದ ನವೆಂಬರ್-2020ರ ಮಾಹೆಯವರೆಗೆ ವೇತನ ರೂ.28.24ಲಕ್ಷ (ಇಪ್ಪತ್ತೆಂಟು ಲಕ್ಷ ಇಪ್ಪತ್ತನಾಲ್ಕು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಡಿ ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಲೆಕ್ಕಶೀರ್ಷಿಕೆಯ ವಿವರಗಳು:

| ಕ್ರ.ಸಂ | ಲೆಕ್ಕಶೀರ್ಷಿಕೆ | ಆರ್ಥಿಕ ಇಲಾಖೆಯಿಂದ ತುಟ್ಟಿ ಭತ್ಯೆ ತಡೆಹಿಡಿದು ಬಿಡುಗಡೆ ಮಾಡಲಾದ ಮೊತ್ತ | ಆಗಸ್ಟ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ಸೆಪ್ಟಂಬರ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ಅಕ್ಟೋಬರ್2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ | ನವೆಂಬರ್-2020ರ ಮಾಹೆಯ ಬಿಡುಗಡೆಗೆ ಮಾಡಬೇಕಾದ ಹಣ |
|---|---|---|---|---|---|---|
| 01. | 2052-00-092-0-09-115 | 37.00 | 3.08 | 3.08 | 3.08 | 3.08 |
| 02. | 2052-00-092-0-09-101 | 47.71 | 3.98 | 3.98 | 3.98 | 3.98 |
| ಒಟ್ಟು | | 84.71 | **7.06** | **7.06** | **7.06** | **7.06** |

ಷರತ್ತುಗಳು:

1. ವೇತನಕ್ಕೆ ಸಂಬಂಧಿಸಿದಂತೆ ಏಪ್ರಿಲ್, ಮೇ ತಿಂಗಳಗ್ಗೆ ಮಾಡಿರುವುದು ಸೇರಿದಂತೆ ಆಯವ್ಯಯದ 8/12 ಭಾಗದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಬಹುದಾಗಿದ್ದು, ಇದರಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಮೊತ್ತವನ್ನು ಹೊರತುಪಡಿಸಿ ಉಳಿದಿರುವ ಮೊತ್ತವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು.

2. 2020-21ನೇ ಸಾಲಿನ ಆಯವ್ಯಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಒದಗಿಸಿರುವ ಅನುದಾನವನ್ನು ಸರ್ಕಾರದಿಂದ ಪ್ರತ್ಯಾಯೋಜಿಸಿ ಮಾಡಿರುವ ಯೋಜನೆಗಳ ಎದುರಾಗಿ ನವೆಂಬರ್ 2020ರವರೆಗೆ ಪರಿಷ್ಕೃತ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಮಾತ್ರ ಬಳಸಿಕೊಳ್ಳತಕ್ಕದ್ದು.

3. ಹೆಚ್.ಆರ್.ಎಂ.ಎಸ್. ಹೊರಗೆ ವೇತನ ಸೆಳೆಯುತ್ತಿರುವ ಸಹಾಯನುದಾನ ಸಂಸ್ಥೆಗಳಗೆ ಆಯವ್ಯಯವನ್ನು ಪರಿಷ್ಕರಿಸುವುದರಿಂದ ಪರಿಷ್ಕೃತ ಆಯವ್ಯಯದಲ್ಲಿ ನವೆಂಬರ್ ತಿಂಗಳುವರೆಗೆ ಪ್ರತಿ ತಿಂಗಳು 1/12ರಂತೆ ಬಿಡುಗಡೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2020, ದಿನಾಂಕ:30-05-2020 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಹೆಚ್.ಕೆ.ಸುರೇಶಬಾಬು)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
(ಆಡಳಿತ ಕನ್ನಡ).

ಪ್ರತಿಯನ್ನು:

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ), (ಇ & ಆರ್.ಎಸ್.ಇ)ಕರ್ನಾಟಕ, ಹೊಸ ಕಟ್ಟಡ "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಎ &ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.
4. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ -7) ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಉಪಕಾರ್ಯದರ್ಶಿಯವರ ಆಪ್ತ ಶಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.